ಪಿ.ಡಬ್ಲೂಃ 1

<u>ದಿನಾಂಕಃ **25.11.2024** ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಭೋದಿಸಲಾಯಿತು</u>

<u>ಮುಂದುವರೆದ ಪಾಟೀ ಸವಾಲುಃ**-** ಪ್ರತಿವಾದಿ ನಂ.**5** ರಿಂದ **10, 12** ರಿಂದ **23, 24(a to c), 26, 27, 29 to 34, 36, 37** ಮತ್ತು **41** ರವರ ಪರವಾಗಿ **Sri. VLP,** ವಕೀಲರಿಂದ</u>

6. ನಾನು, ಬಸಪ್ಪ ಹನಮಪ್ಪ ಹಾಗೂ ನೀಲಪ್ಪ ಸೇರಿ ಈ ದಾವೆಯನ್ನು ಮಾಡಿರುತ್ತೇವೆ. 1 ಮತ್ತು 2 ನೇ ವಾದಿ ಶಾಲೆ ಕಲೆತಿದ್ದು ಸಹಿ ಮಾಡುತ್ತಾರೆ ಎಂದರೆ ಸರಿ. ದಾವಾ ಆಸ್ತಿಯು ಭೂ ಪರಿವರ್ತನೆ ಆಗಿದೆ ಎಂದರೆ ಸರಿಯಲ್ಲ. 1960 ರಲ್ಲಿ ದಾವಾ ಆಸ್ತಿಯನ್ನು ಭೂ ಪರಿವರ್ತನೆ ಮಾಡಿಸಿದ್ದು, ಪಹಣಿ ಪತ್ರಿಕೆಯಲ್ಲಿ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಅದು ಬರೆದುಕೊಂಡು ಮುಂದುವರೆದಿದೆ ಎಂದು ನುಡಿಯುತ್ತಾರೆ. ಶಿವಪ್ಪ, ಕೆಂಚಪ್ಪ ಮತ್ತು ಬಸಪ್ಪ 3 ಜನರು ಕೂಡಿ ಭೂ ಪರಿವರ್ತನೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ.

7. ನನ್ನ ತಂದೆಯು ಮರಣ ಹೊಂದುವ ಕಾಲಕ್ಕೆ ನನಗೆ ಸುಮಾರು 25 ವರ್ಷ ವಯಸ್ಸಾಗಿತ್ತು. ನಾನು ಯಾರ ಮೇಲೆ ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ದಾವೆ ತಯಾರು ಮಾಡಲು ಯಾರು ಮಾಹಿತಿ ನೀಡಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ವಾದ ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ವಾದ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಮತ್ತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

8. 5 ರಿಂದ 46 ನೇ ಪ್ರತಿವಾದಿಯರು ಪು.ಬಡ್ನಿ ಗ್ರಾಮದವರು ಎಂದರೆ ಸರಿ. ಸರ್ವೇ ನಂ.6/1 ರಲ್ಲಿ 5 ರಿಂದ 46 ನೇ ಪ್ರತಿವಾದಿಯರು ಕೇಲವರು ಮನೆ ಕಟ್ಟಿದ್ದು, ಗುಡಿಸಲು ಕಟ್ಟಿಕೊಂಡು ಹಾಗೂ ಕೇಲವರು ಖಾಲಿ ಜಾಗ ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿ. ಸರ್ವೇ ನಂ.6/1 ರಲ್ಲಿ ಮನೆ ಹಾಗೂ ಗುಡಿಸಲು ಕಟ್ಟಿಕೊಂಡು ಅಜಮಾಸು 25 ವರ್ಷಗಳಿಂದ ಇದ್ದಾರೆ ಎಂದರೆ ಸರಿ. ಕೇಲವರು ಆರ್.ಸಿ.ಸಿ. ಮನೆ ಕಟ್ಟಿಕೊಂಡಿದ್ದು, ಕೇಲವರು ಮಣ್ಣಿನ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ.

9. 5 ರಿಂದ 46 ನೇ ಪ್ರತಿವಾದಿಯರ ಹೆಸರು ಅವರ ಅವರ ಅಳತೆಯ ಆಸ್ತಿಗಳಿಗೆ ಪಂಚಾಯತಿಯಲ್ಲಿ ಹೆಸರು ದಾಖಲಾಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಮಾರಾಟವಾಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರು ನನ್ನ ತಂದೆ ಹಾಗೂ ಅವರ ಸಹೋದರರಿಂದ ಖರೀದಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆಗಳು ಕಟ್ಟಿರುವ ಬಗ್ಗೆ ಪಂಚಾಯತಿಯಲ್ಲಿ ದಾಖಲೆ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಿರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಮಾಹಿತಿ ಗೋತ್ತಾಗಿದ್ದು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮಾಹಿತಿಯು ನನಗೆ 25 ವರ್ಷಗಳ ಹಿಂದೆ ತಿಳಿದು ಬಂದಿರುತ್ತದೆ.

10. ಪ್ರತಿವಾದಿಯರ ಪ್ರತಿಯೊಂದು ಮನೆಗೂ ವಿದ್ಯೂತ, ನೀರು ಮತ್ತು ರಸ್ತೆ ಸಂಪರ್ಕ ಇರುತ್ತದೆ ಎಂದರೆ ಸಾಕ್ಷಿಯು ಅವರ ಅನುಕೂಲತೆಗೆ ತಕ್ಕಂತೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಕೆ.ಇ.ಬಿ. ಇಲಾಖೆಯವರು

ವಿದ್ಯೂತ ಕಂಬಗಳನ್ನು ಬೀದಿ ರಸ್ತೆಯಲ್ಲಿ ಹಾಕಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ವಿದ್ಯೂತ ಹಾಗೂ ನೀರಿನ ಸಂಪರ್ಕವನ್ನು ಸುಮಾರು 25 ವರ್ಷಗಳ ಹಿಂದೆ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಕೆ.ಇ.ಬಿ. ಇಲಾಖೆಯವರು ವಿದ್ಯೂತ ಕಂಬ ಹಾಕುವಾಗ ನಾನು ಯಾವುದೇ ತಕರಾರು ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರ ಆಸ್ತಿಗಳಿಗೆ ಗ್ರಾಮ ಪಂಚಾಯತಿ ವತಿಯಿಂದ ನೀರು ಸರಬರಾರು ಮಾಡುತ್ತಿರುವುದನ್ನು ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ನನ್ನ ತಂದೆ ತೀರಿದ ನಂತರ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ.

11. 1 ನೇ ಪ್ರತಿವಾದಿಯು ನನ್ನ ಚಿಕ್ಕಪ್ಪನ ಮಗಳು ಆಗಬೇಕು. 1 ನೇ ಪ್ರತಿವಾದಿಯು ದಾವಾ ಆಸ್ತಿಯ ವಿಚಾರವಾಗಿ ತಹಶೀಲ್ದಾರ ಕಚೇರಿಯಲ್ಲಿ ಅರ್ಜಿ ನೀಡಿದ್ದ ಬಗ್ಗೆ ನನಗೆ ಗೋತ್ತಿಲ್ಲ. 5 ರಿಂದ 46 ನೇ ಪ್ರತಿವಾದಿಯರ ಆಸ್ತಿಯ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. 5 ರಿಂದ 46 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿರುವ ಹಕ್ಕಿನ ಕುರಿತು ವಿಚಾರ ಮಾಡಿರುತ್ತೇವೆ. 5 ರಿಂದ 46 ನೇ ಪ್ರತಿವಾದಿಯರನ್ನು ನಾನು ದಾವಾ ವಿಚಾರವಾಗಿ ಯಾವತ್ತು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. 5 ರಿಂದ 46 ನೇ ಪ್ರತಿವಾದಿಯರು ಶಿವಪ್ಪ, ಕೆಂಚಪ್ಪ ಮತ್ತು ಬಸಪ್ಪ ರವರಿಂದ ಭೂ ಪರಿವರ್ತನೆಯಾದ ಪ್ಲಾಟುಗಳನ್ನು ಖರೀದಿ ಮಾಡಿರುವ ವಿಚಾರ ಗೋತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಪಡೆದ

ದಿನಾಂಕದಿಂದಲೂ ಪ್ರತಿವಾದಿಯರು ಮತ್ತು ಅವರ ಪೂರ್ವಜರ ಹೆಸರು ಪಂಚಾಯತಿಯಲ್ಲಿ ಖರೀದಿ ಪತ್ರದಂತೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ.

12. ಮೃತ ಶಂಕರಗೌಡ ಈ ದಾವೆಯನ್ನು ನನ್ನ ಮುಖಾಂತರ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂ.**28, 35** ಮತ್ತು **38** ರವರ ಪರ ವಕೀಲರು ಹಾಜರಿದ್ದು ಪ್ರತಿವಾದಿ ನಂ.**5** ರಿಂದ **10, 12** ರಿಂದ **23, 24(a to c), 26, 27, 29 to 34, 36, 37** ಮತ್ತು **41** ರವರ ಪರವಾಗಿ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ

(ನನ್ನ ಉಖ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇಳಿ.ಕೇ.ಸರಿ ಅದೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ